ಸುಮಾರು ಕೆಲಸಗಳು, ಶಾಲಾ ಕಟ್ಟಡಗಳು ಯಾವುದೇ ಸುಣ್ಣ ಬಣ್ಣ ಹೊಡೆಯದೆಯೇ ಬಿಲ್ಲುಗಳನ್ನು ಮಾಡಿ ಪೇಮೆಂಟ್ ಕೊಟ್ಟಿದ್ದಾರೆ. ಡಾಂಬರು ರಸ್ತೆಗಳನ್ನು ಹಾಕಿಲ್ಲ. ಚುನಾವಣೆಗೆ ಒಂದು ವಾರ ಅಥವಾ 10 ದಿವಸಗಳು ಇದ್ದಾಗ ಚೆಕ್‌ಗಳನ್ನು ಬರೆಯಬಾರದು ಎನ್ನುವ ಸರ್ಕಾರದ ಆದೇಶ ಇದ್ದರೂ ಸಹ, ಸುಮಾರು 28 ಲಕ್ಷ ರೂಪಾಯಿಗಳ ಪೇಮೆಂಟ್ ಆಗಿದೆ. ಇದರಲ್ಲಿ 16 ಲಕ್ಷ ರೂಪಾಯಿಗಳ ಕೆಲಸ ಆಗಿಲ್ಲ. ಕೆಂಗೇರಿ ಹೋಬಳಿ, ಉತ್ತರಹಳ್ಳಿ ಹೋಬಳಿ, ಯಶವಂತಪುರ ಹೋಬಳಿಗಳಲ್ಲಿ ಇದು ನಡೆದಿದೆ. ಅದಕ್ಕೆ ತಾವು ಒಬ್ಬ ಮುಖ್ಯ ಇಂಜಿನಿಯರ್ ನೇಮಿಸಿ ವಿಚಾರಣೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಬಹಳ ಗುರುತರವಾದಂಥ ಅಪಾದನೆಗಳನ್ನು ಮಾಡಿದ್ದಾರೆ. ಅವರು ತಿಳಿಸಿದ ಸ್ಥಳಗಳಲ್ಲಿ ಆಡಳಿತ ಮಂಡಳಿ ಅಸ್ತಿತ್ವದಲ್ಲಿ ಇರುವುದರಿಂದ ಅಲ್ಲಿ ಬಿ.ಡಿ.ಓ. ಅವರು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತಾರೆ. ಅಲ್ಲಿ ನಮ್ಮ ಕಾನೂನು ಪ್ರಕಾರ ನಡೆಯುವುದಿಲ್ಲ. ಈ ತರಹ ಸುಮಾರು 6.15 ಲಕ್ಷ ರೂಪಾಯಿಗಳಷ್ಟು ಬೇರೆ ಬೇರೆ ಕೆಲಸವನ್ನು 1994-95ರಲ್ಲಿ ಮಾಡಿದ್ದೇವೆ. ನಿರ್ದಿಷ್ಟವಾದಂಥ ಪ್ರಕರಣಗಳನ್ನು ಮಾನ್ಯ ಸದಸ್ಯರು ಗಮನಕ್ಕೆ ತಂದರೆ ನಾವು ಖಂಡಿತವಾಗಿಯೂ ಮಾಡುತ್ತೇವೆ. ಈ ಸದನದಲ್ಲಿ ಪ್ರಸ್ತಾಪ ಮಾಡಿರುವಂತೆ ನಾನು ಈ ವಿಚಾರದಲ್ಲಿ ಒಂದು ಜಾಗೃತ ಆಯೋಗವನ್ನು ಏರ್ಪಾಡು ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ : ಇಬ್ಬರನ್ನು ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಯಾವ ಕಾರಣದಿಂದ ಅವರನ್ನು ಸಸ್ಪೆಂಡ್ ಮಾಡಿದ್ದರು ಮತ್ತು ಅವರನ್ನು ಪುನಃ ಕೆಲಸಕ್ಕೆ ಏಕೆ ತೆಗೆದುಕೊಂಡರು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ತಮಗೆ ಗೊತ್ತಿರುವ ಹಾಗೆ "ಆಶ್ರಯ" ಯೋಜನೆಯಲ್ಲಿ ನಿವೇಶನಗಳನ್ನು ಹಂಚುವ ವಿಚಾರದಲ್ಲಿ ಆದಂಥ ಅವ್ಯವಹಾರಗಳ ಬಗ್ಗೆ ಹಿಂದಿನ ಸರ್ಕಾರದವರು ನೇಮಕ ಮಾಡಿದ್ದ ಸಿ.ಓ.ಡಿ. ತನ್ನ ವರದಿ ಕೊಟ್ಟಿದೆ. ಆ ವರದಿಯ ಆಧಾರದ ಮೇಲೆ ನನ್ನ ಹಿರಿಯ ಸಹೋದ್ಯೋಗಿಯಾದಂಥ ಮಾನ್ಯ ಜಾಲಪ್ಪನವರು ತಮ್ಮ ಇಲಾಖೆಗೆ ಬರತಕ್ಕಂಥ ಕೆಲವು ತಹಶೀಲ್ದಾರ್‌ಗಳನ್ನು ಅಮಾನತ್ತಿನಲ್ಲಿಟ್ಟರು. ಮತ್ತು ನನ್ನ ಇಲಾಖೆಯ ವ್ಯಾಪ್ತಿಯಲ್ಲಿ ಬರತಕ್ಕಂಥ ಸುಧಾಕರ್ ಮತ್ತು ಲಿಂಗಯ್ಯ ಶೆಟ್ಟಿ ಎನ್ನುವ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟೆವು. ಅದರಲ್ಲಿ ಲಿಂಗಯ್ಯ ಶೆಟ್ಟಿಯವರು ಆಡಳಿತ ಮಂಡಳಿಗೆ ಹೋಗಿಲ್ಲ. ಅವರು ಇನ್ನೂ ಅಮಾನತ್ತಿನಲ್ಲಿದ್ದಾರೆ. ಮತ್ತೊಬ್ಬರು, ಸುಧಾಕರ್ ಎನ್ನುವವರಿಗೆ ತಡೆಯಾಜ್ಞೆ ಸಿಕ್ಕಿದೆ, ಅವರು ಕೆಲಸದಲ್ಲಿ ಮುಂದುವರೆದಿದ್ದಾರೆ.

ಪ್ರಶ್ನೆ ಸಂಖ್ಯೆ : 879 :

ಶ್ರೀ ಬಾಳಾ ಸಾಹೇಬ್ ವರ್ಡರ್ : ಸನ್ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ನೀಡಿರುವ ಉತ್ತರದಿಂದ ನನಗೆ ಸಮಾಧಾನಕರವಾಗಿದೆ. ಆದ್ದರಿಂದ ನಾನು ಉಪಪ್ರಶ್ನೆಯನ್ನು ಕೇಳುವುದಿಲ್ಲ.

ಅಧ್ಯಕ್ಷರು : ಈ ಜಗದೀಶ ಪಾಟೀಲ ಅವರ ತಡೆಹಿಡಿದ ಪ್ರಶ್ನೆ ಸಂಖ್ಯೆ : 572 ಶ್ರೀ ಚಿಮ್ಮನ ಕಟ್ಟಿಯವರು ಕೇಳುತ್ತಾರೆ.

ಬೀಳಗಿ ಪಟ್ಟಣದಲ್ಲಿ ಕುಡಿಯುವ ನೀರಿನ ತೊಂದರೆ

572 - ಶ್ರೀ ಜಿ.ಟಿ ಪಾಟೀಲ್ (ಬೀಳಗಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿ ಬೀಳಗಿ ಪಟ್ಟಣಕ್ಕೆ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆ ಖಾಯಂ ಆಗಿ ನಿವಾರಿಸಲು ಸರ್ಕಾರದವರು ನಿರ್ದಿಷ್ಟವಾದ ಯೋಜನೆ ರೂಪಿಸುವರೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಬಿಜಾಪುರ ಜಿಲ್ಲೆಯ ಬೀಳಗಿ ಪಟ್ಟಣಕ್ಕೆ ಈಗಾಗಲೇ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಇದ್ದು ದಿನಕ್ಕೆ 33 ಲೀಟರ್ ತಲಾ ಒಬ್ಬರಿಗೆ ಸರಬರಾಜು ಮಾಡಲಾಗುತ್ತಿದೆ.

ಆ) ಈಗ ಪೂರೈಸುತ್ತಿರುವ ನೀರಿನ ಪ್ರಮಾಣವನ್ನು ಹೆಚ್ಚಿಸಲು 1994-95ನೇ ಸಾಲಿನಲ್ಲಿ ಹೆಚ್ಚುವರಿ ಜಲಸಂಗ್ರಹಾಲಯ ನಿರ್ಮಾಣ ಹಾಗೂ ಹಾಲಿ ಇರುವ 2 ಹೆಚ್ಚು ಇಳುವರಿ ಕೊಳವೆಬಾವಿಗಳನ್ನು ಈಗಿದ್ದ ವ್ಯವಸ್ಥೆಯಲ್ಲಿ ಅಳವಡಿಸಲು ಮಂಜೂರಾತಿ ದೊರೆತಿದೆ. ಹಾಗೂ ಕೆಲಸ ಪ್ರಗತಿಯಲ್ಲಿದೆ. ಸದರಿ ಹೆಚ್ಚಳ ಕಾಮಗಾರಿಯನ್ನು 5/95ರೊಳಗಾಗಿ ಮುಗಿಸಿ ದಿನಕ್ಕೆ 58 ಲೀಟರ್‌ನಷ್ಟು ನೀರನ್ನು ಪ್ರತಿಯೊಬ್ಬರಿಗೆ ಸರಬರಾಜು ಮಾಡುವ ವ್ಯವಸ್ಥೆಯಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಇದು ತಪ್ಪಾಗಿ ನಗರಾಭಿವೃದ್ಧಿ ಸಚಿವರ ಕಡೆಗೆ ಹೋಗಿತ್ತು. ಇದಕ್ಕೆ ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಬಿ.ಟಿ. ಚಿಮ್ಮನಕಟ್ಟಿ (ಶ್ರೀ ಜೆ.ಟಿ. ಪಾಟೀಲರ ಪರವಾಗಿ) : ನಾನು ಹೇಳಿರುವುದು ಬೀಳಗಿ ವ್ಯಾಪ್ತಿಗೆ ಬರುತ್ತದೆ.

ಅಧ್ಯಕ್ಷರು : ಅದನ್ನೇ ಹೇಳಿದ್ದಾರೆ. ಉತ್ತರವನ್ನು ಒದಗಿಸಿದ್ದಾರೆ. ನೀವು ಉಪಪ್ರಶ್ನೆ ಕೇಳುವುದಿದ್ದರೆ ಕೇಳಿ, ಉತ್ತರದಿಂದ ಸಮಾಧಾನ ಆಗಿದ್ದರೆ ಬಿಟ್ಟು ಬಿಡಿ.

ಶ್ರೀ ಬಿ.ಟಿ. ಚಿಮ್ಮನಕಟ್ಟಿ : ಈಗ ತಾವು ಕೊಟ್ಟಿರುವ ಅಂಕಿ ಸಂಖ್ಯೆಗಳ ಆಧಾರದ ಮೇಲೆ ದಿನಕ್ಕೆ 58 ಲೀಟರ್‌ನಷ್ಟು ನೀರು ಒದಗಿಸುತ್ತೇವೆ ಎಂದು ತಾವು ಹೇಳಿರುವಿರಿ. ಇದನ್ನು ಆದಷ್ಟು ಶೀಘ್ರ ಮುಗಿಸಬೇಕು. ಬಹುಶಃ ಈಗ ನಾನು ಹೇಳುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೋ, ಇಲ್ಲವೋ ಗೊತ್ತಿಲ್ಲ. ಬೀಳಗಿ ತಾಲ್ಲೂಕು ಆಲಮಟ್ಟಿ ಜಲಾಶಯದಿಂದ ಮುಳುಗಡೆ ಆಗತಕ್ಕಂಥ ಪ್ರದೇಶ. 30-40 ಹಳ್ಳಿಗಳ ಗ್ರಾಮಸ್ಥರು ಬೀಳಗಿಯಲ್ಲಿ ಬಂದು ನೆಲಸಲಿಕ್ಕೆ ಪುನರ್‌ವಸತಿ ವ್ಯವಸ್ಥೆಯನ್ನು ಮಾಡಿದ್ದೀರಿ. ಆ ಜನರು ಅಲ್ಲಿಗೆ ಬಂದಾಗ ಈ ಕುಡಿಯುವ ನೀರಿನ ವ್ಯವಸ್ಥೆ ಎಷ್ಟರ ಮಟ್ಟಿಗೆ ಉತ್ತಮಗೊಳ್ಳುತ್ತದೆ ಎನ್ನುವುದು ಒಂದು ವಿಚಾರ. ಆದ್ದರಿಂದ ಈಗ ನಾನು ಪ್ರಶ್ನೆ ಕೇಳಿರತಕ್ಕಂಥಾದ್ದರ ಮುಖ್ಯ ಉದ್ದೇಶ ಏನೆಂದರೆ ಈ ಕುಡಿಯುವ ನೀರಿನ ಸಮಸ್ಯೆಯ ಸಲುವಾಗಿ ಅದನ್ನು ಖಾಯಂ ಆಗಿ ನಿವಾರಿಸಲು ಸರ್ಕಾರದ ನಿರ್ದಿಷ್ಟವಾದಂಥ ಕ್ರಮ ಏನು?

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮುದ್ದೇಶ್ವರ ಗುಡಿಯ ಹತ್ತಿರ ಹಾಗೂ ಇಂಜಿನಿಯರಿಂಗ್ ಉಪ ವಿಭಾಗದ ಕಾಂಪೌಂಡ್‌ನಲ್ಲಿ ಇರತಕ್ಕಂಥ ಕೊಳವೆ ಬಾವಿಗಳ ಮೂಲಕ 33 ಲೀಟರಿನಷ್ಟು ನೀರು ಕೊಡುವ ವ್ಯವಸ್ಥೆ ಇದೆ. ಅದು ಗರಿಷ್ಠ ಮಿತಿಗೆ ಸರಿಹೋಗುವುದಿಲ್ಲವೆಂದು, 58 ಲೀಟರ್‌ನಷ್ಟಾದರೂ ಕೊಡಬೇಕು ಎನ್ನುವ ಕಾರಣಕ್ಕಾಗಿ ಸುಮಾರು 11.57 ಲಕ್ಷ ರೂಪಾಯಿಗಳ ಎರಡು ಯೋಜನೆಗಳನ್ನು ಮಾಡಿದ್ದೇವೆ. ಸುಮಾರು 25 ಕೈ ಪಂಪುಗಳ ಜೋಡಣೆ ಮೂಲಕವಾಗಿ ಮತ್ತು ಹೊಸ ಜಲಾಗಾರವನ್ನು ಸ್ಥಾಪನೆ ಮಾಡುವುದರ ಮೂಲಕವಾಗಿ ಬೀಳಗಿ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಇನ್ನೊಂದು ಸಂತೋಷದ ಸಂಗತಿ ಎಂದರೆ ನೆದರ್‌ಲ್ಯಾಂಡಿನ ಡ್ಯಾನಿಡಾ ಯೋಜನೆಯಲ್ಲಿ ಬಿಜಾಪುರ, ಕೋಲಾರ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನು ಆಯ್ಕೆ ಮಾಡಿದ್ದೇವೆ. ಇದು ಸಂಪೂರ್ಣವಾಗಿರತಕ್ಕಂಥ ಅನುದಾನ. ಬಿಜಾಪುರ, ಕೋಲಾರ ಮತ್ತು ಚಿತ್ರದುರ್ಗ ಈ ಮೂರೂ ಜಿಲ್ಲೆಗಳ ಕುಡಿಯುವ ನೀರಿನ ಮತ್ತು ನಿರ್ಮಿಲೀಕರಣದ ವ್ಯವಸ್ಥೆಗಾಗಿ 266 ಕೋಟಿ ರೂಪಾಯಿ ಯೋಜನೆ ಈಗಾಗಲೇ ಆಗಿದೆ. ಅದನ್ನು ನಾವು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಕೇಂದ್ರದಿಂದ ಒಪ್ಪಿಗೆ ಬಂದ ತಕ್ಷಣವೇ ಇದು ಈ ಮೂರು ಜಿಲ್ಲೆಗಳಿಗೆ ಒಂದು ವರದಾನವಾಗುತ್ತದೆ ಎಂದು ತಮ್ಮ ಮೂಲಕ ತಿಳಿಸಲಿಚ್ಚಿಸುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ದಿನಾಂಕ 3-4-95ರಂದು ಲಿಖಿತ ಉತ್ತರಿಸುವ 10ನೇ ಪಟ್ಟಿಯಲ್ಲಿರುವ 87 ಪ್ರಶ್ನೆಗಳ ಪೈಕಿ 69 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಬೀದರ್ ಜಿಲ್ಲೆಯ ಹಳ್ಳಿಗಳಿಗೆ ಕುಡಿಯುವ ನೀರಿನ ಅಭಾವ

999- ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಜಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಹಳ್ಳಿಗಳಲ್ಲಿ ಕುಡಿಯುವ ನೀರಿನ ತೀವ್ರತೆ ಉಂಟಾಗಿದೆ (ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಈ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ತೆಗೆದುಕೊಂಡಿರುವ ಕ್ರಮವೇನು?

ಇ) ಎಷ್ಟು ಕೊಳವೆಬಾವಿಗಳನ್ನು ಪೂರೈಸಲಾಗಿದೆ? ಮತ್ತು ಎಷ್ಟು ಕಿರುನೀರು ಸರಬರಾಜು ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ?

ಈ) 1994-95ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ಹಣವೆಷ್ಟು?

ಉ) 1995-96ನೇ ಸಾಲಿನಲ್ಲಿ ಪ್ರಸ್ತಾಪಿಸಬಹುದಾದ ಹಣವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಜಾಯತ್ ರಾಜ್ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ 222 ಗ್ರಾಮಗಳಲ್ಲಿ ಕುಡಿಯುವ ನೀರಿನ ತೀವ್ರತೆ ಉಂಟಾಗಿರುತ್ತದೆ.

ಕ್ರ.ಸಂ.	ತಾಲ್ಲೂಕು	ತೀವ್ರತೆ ಉಂಟಾಗಿರುವ ಹಳ್ಳಿಗಳ ಸಂಖ್ಯೆ
1.	ಔರಾದ್	35
2.	ಬಾಲ್ಕಿ	69
3.	ಬೀದರ್	35
4.	ಬಸವಕಲ್ಯಾಣ	55
5.	ಹುಮನಾಬಾದ್	28
	ಒಟ್ಟು	222